# ಕರ್ನಾಟಕ ವಿಧಾನ ಪರಿಷತ್ತು

## 155ನೇ ಅಧಿವೇಶನ

| | | |
|---|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | 1222 (1368) |
| ಸದಸ್ಯರ ಹೆಸರು | : | ಶ್ರೀ. ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19-03-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಸ್ತೆಗಳ ನಿರ್ವಹಣೆಗಾಗಿ ಬಿಡುಗಡೆಯಾದ ಅನುದಾನ ಪೂರ್ಣವಾಗಿ ವೆಚ್ಚವಾಗಿದೆಯೇ; ಇವುಗಳಲ್ಲಿ ಜಂಗಲ್ ಕ್ಲಿಯರೆನ್ಸ್, ರಸ್ತೆ ಅಂಚು ಮತ್ತು ಚರಂಡಿಗಳ ನಿರ್ವಹಣೆ, ಬರ್ಮ ಕಟ್ಟಿಂಗ್, ಗುಂಡಿಗಳನ್ನು ಮುಚ್ಚುವ ಕಾಮಗಾರಿ ಹಾಗೂ ಅಪಾಯಕಾರಿ ಕಟ್ಟಡ ಮತ್ತು ಮರಗಳನ್ನು ತೆರವುಗೊಳಿಸುವ ನಿರ್ವಹಣೆ ಮಾಡಲಾಗಿದೆಯೇ;</td><td>ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಸ್ತೆಗಳ ನಿರ್ವಹಣೆಗಾಗಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರಗಳು ಕೆಳಕಂಡಂತಿದೆ.<br>(ರೂ.ಲಕ್ಷಗಳಲ್ಲಿ)
<table>
<tr><th>ಕ್ರ. ಸಂ</th><th>ರಸ್ತೆ</th><th>ಅನುದಾನ</th></tr>
<tr><td>1</td><td>ರಾಜ್ಯ ಹೆದ್ದಾರಿ</td><td>392.00</td></tr>
<tr><td>2</td><td>ಜಿಲ್ಲಾ ಮುಖ್ಯ ರಸ್ತೆ</td><td>400.00</td></tr>
</table>
ಮೇಲ್ಕಂಡಂತೆ ಬಿಡುಗಡೆ ಮಾಡಿರುವ ಅನುದಾನದಲ್ಲಿ ಬಹುತೇಕ ನಿರ್ವಹಣೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.<br><br>ಸದರಿ ಅನುದಾನವನ್ನು ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಇಕ್ಕೆಲೆಗಳಲ್ಲಿ ಜಂಗಲ್ ಕ್ಲಿಯರೆನ್ಸ್, ರಸ್ತೆ ಅಂಚು ಮತ್ತು ಚರಂಡಿಗಳ ನಿರ್ವಹಣೆ, ಬರ್ಮ ಕಟ್ಟಿಂಗ್, ಗುಂಡಿಗಳನ್ನು ಮುಚ್ಚುವ ಕಾಮಗಾರಿ ಮತ್ತು ರಸ್ತೆ ನಿರ್ವಾಹಕರ ವೇತನ ಪಾವತಿಸಲು ಉಪಯೊಗಿಸಲಾಗುತ್ತದೆ.<br>ಅಪಾಯಕಾರಿ ಮರಗಳನ್ನು ತೆರವುಗೊಳಿಸ ಬೇಕಾಗಿರುವಂತಹ ನಿರ್ದಿಷ್ಟ ಪ್ರಕರಣಗಳನ್ನು ಅರಣ್ಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗುವುದು. ಹಾಗೂ ಅಪಯಕಾರಿ ಕಟ್ಟಡಗಳನ್ನು ತರವುಗೊಳಿಸುವ ಪ್ರಕರಣ ಯಾವುದು ಇರುವುದಿಲ್ಲ.</td></tr>
<tr><td>ಆ)</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಲೋಕೋಪಯೋಗಿ ರಸ್ತೆಗಳ ಅಂಚಿನಲ್ಲಿ ಎಷ್ಟು ಅಗಲದ ಪ್ರದೇಶವನ್ನು ತೆರೆದ (ಓಪನ್ ಸ್ಪೇಸ್) ಪ್ರದೇಶವನ್ನಾಗಿ ನಿರ್ವಹಿಸಬೇಕಾಗಿದೆ; ಈ ಜಿಲ್ಲೆಗಳ ಯಾವ ರಸ್ತೆಗಳ ಬದಿಯಲ್ಲಿ ಹುಲ್ಲು, ಅಪಾಯಕಾರಿ ಕಟ್ಟಡ ಮತ್ತು ಮರಗಳನ್ನು ತೆರವುಗೊಳಿಸಲಾಗಿದೆ.</td><td>ಲೋಕೋಪಯೋಗಿ ಇಲಾಖೆಯ ರಾಜ್ಯಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಯಲ್ಲಿ Drain to Drain / ಚರಂಡಿ ಇಲ್ಲದಿರುವ ರಸ್ತೆಯ ಭಾಗದಲ್ಲಿ Sholder to Sholder ರಸ್ತೆಯ ಅಂಚಿನವರೆಗಿನ ಪ್ರದೇಶವನ್ನು ಇಲಾಖಾ ವತಿಯಿಂದ ನಿರ್ವಹಣೆ ಮಾಡಬೇಕಾಗಿರುತ್ತದೆ.</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ರಸ್ತೆಗಳ ಬದಿಯಲ್ಲಿರುವ ಹುಲ್ಲುಗಳನ್ನು ಆಗ್ಗಿಂದಾಗ್ಗೆ ತೆರವುಗೊಳಿಸಲಾಗುತ್ತಿದೆ ಹಾಗೂ ಅಪಾಯಕಾರಿ ಮರಗಳ ಬಗ್ಗೆ ಅರಣ್ಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ ಹಾಗೂ ಸದರಿ ಮರಗಳನ್ನು ಅರಣ್ಯ ಇಲಾಖಾ ವತಿಯಿಂದ ತೆರವುಗೊಳಿಸಲು ಕ್ರಮವಹಿಲಾಗುತ್ತಿದೆ.<br>ರಸ್ತೆಯ ಅಂಚಿನಲ್ಲಿ ಯಾವುದೇ ಅಪಾಯಕಾರಿ ಕಟ್ಟಡಗಳು ವಲಯ ವ್ಯಾಪ್ತಿಯಲ್ಲಿ ಇರುವುದಿಲ್ಲ. |
| ಇ) | ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಸ್ತೆಗಳ ಅಂಚಿನಲ್ಲಿ ಕಟ್ಟಡ ಕಟ್ಟುವರಿಗೆ ನೀಡಿದ ನಿರಾಕ್ಷೇಪಣಾ ಪತ್ರದಲ್ಲಿ ದಾಖಲಿಸಿರುವ ಷರತ್ತುಗಳೇನು? ಅನ್ವಯಿಸಿರುವ ನಿಯಮಗಳಾವುವು; | ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿನ ರಸ್ತೆಗಳ ಅಂಚಿನಲ್ಲಿ ಕಟ್ಟಡ ಕಟ್ಟುವವರಿಗೆ ನೀಡುವ ನಿರಾಕ್ಷೇಪಣಾ ಪತ್ರದಲ್ಲಿ ಈ ಕೆಳಗಿನ ಷರತ್ತುಗಳನ್ನು ವಿಧಿಸಿ ನಿರಾಕ್ಷೇಪಣಾ ಪತ್ರ ನೀಡಲಾಗುತ್ತದೆ.<br>1) ರಾಜ್ಯ ಹೆದ್ದಾರಿ ಹಾಗೂ ಜಿ.ಮು.ರಸ್ತೆಗಳ ಬದಿಯಲ್ಲಿ ಯಾವುದೇ ಕಟ್ಟಡವನ್ನು ಕಟ್ಟುವ ಮುನ್ನ ಸರಕಾರದ ಆದೇಶ ಸಂಖ್ಯೆ: ಲೋ.ಇ:362: ಸಿ.ಆರ್‌ಎಂ:1998, ದಿನಾಂಕ:09-10-1998 ಮತ್ತು ಸರಕಾರದ ಆದೇಶ ಸಂಖ್ಯೆ.ಲೋ.ಇ: 84:ಸಿ.ಆರ್‌ಎಂ: 2025(ಇ): ದಿನಾಂಕ:17-02-2025 ರಂತೆ ರಸ್ತೆಯ ದಾಖಲಿತ ರಸ್ತೆಯ ಭೂಗಡಿಯ ಅಂಚಿನಿಂದ ನಿಗಧಿಪಡಿಸಿದ ಅಂತರ ಬಿಟ್ಟು ಕಟ್ಟಡವನ್ನು ನಿರ್ಮಿಸತಕ್ಕದ್ದು.<br>2) ರಾಜ್ಯ ಹೆದ್ದಾರಿ / ಜಿಲ್ಲಾ ಮುಖ್ಯ ರಸ್ತೆಯ ದಾಖಲಿತ ರಸ್ತೆಯ ಭೂಗಡಿಯ ಅಂಚಿನಿಂದ ನಿಗಧಿಪಡಿಸಿದ ಅಂತರಕ್ಕಿಂತ ನಂತರ ಸರಕಾರಿ ಜಾಗವಿದ್ದಲ್ಲಿ ಸರಕಾರಿ ಜಾಗದ ಗಡಿಯವರೆಗೆ ಅಂತರ ಬಿಟ್ಟು ಕಟ್ಟಡವನ್ನು ನಿರ್ಮಿಸತ್ಕದ್ದು, ಸದರಿ ಅಂತರದ ಒಳಭಾಗದಲ್ಲಿ ನಿರ್ಮಾಣ ಕಾಮಗಾರಿ ಮಾಡಿದ್ದಲ್ಲಿ ಆಗುವ ಕಾನೂನು ತೊಡಕುಗಳಿಗೆ ಅರ್ಜಿದಾರರೇ ಹೊಣೆಗಾರರಾಗುತ್ತಾರೆ.<br>3) ಇಲಾಖಾ ರಸ್ತೆಗೆ ಕೂಡು ರಸ್ತೆ ನಿರ್ಮಿಸುವುದಾದಲ್ಲಿ ಸೂಕ್ತ ಚರಂಡಿ ವ್ಯವಸ್ಥೆಯೊಂದಿಗೆ ಈ ಇಲಾಖೆಯ ಅನುಮತಿಯನ್ನು ಪಡೆದುಕೊಂಡು ಕೈಗೊಳ್ಳತಕ್ಕದ್ದು.<br>4) ಇಲಾಖಾ ರಸ್ತೆಯ ಬದಿಯಲ್ಲಿ ಚರಂಡಿಯಲ್ಲಿ ಮಳೆಯ ನೀರು ಹರಿದು ಹೋಗಲು ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಗಮನ ನೀಡತಕ್ಕದ್ದು.<br>5) ರಸ್ತೆಯ ಭುಜಗಳಲ್ಲಿರುವ ಮೋರಿ, ಸೇತುವೆ, ಕಿ.ಮೀ. ಕಲ್ಲು ಹಾಗೂ ಸೂಚನಾ ಫಲಕ ಮತ್ತು ಇತರೆ ಸರ್ಕಾರಿ ಸ್ವತ್ತುಗಳಿಗೆ ಹಾನಿಯಾಗದಂತೆ ನಿಗಾವಹಿಸುವುದು.<br>6) ಮೇಲಿನ ಷರತ್ತುಗಳನ್ನು ಉಲ್ಲಂಘನೆ ಮಾಡಿದಲ್ಲಿ ಕಟ್ಟಡ ನಿರಾಕ್ಷೇಪಣಾ ಪತ್ರವು ತನ್ನಿಂದತಾನೇ ರದ್ದಾಗುವುದು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಈ) | ರಸ್ತೆ ಅಂಚಿನಲ್ಲಿ ಕಟ್ಟಡ ಕಟ್ಟುವವರಿಗೆ ನಿರಾಕ್ಷೇಪಣಾ ಪತ್ರ ನೀಡುವಾಗ ಲೋಕೋಪಯೋಗಿ ಇಲಾಖೆ ಗ್ರಾಮ ಪಂಚಾಯಿತಿಗಳಿಗೆ ಅಭಿಪ್ರಾಯ ಕೋರಿ ಎಷ್ಟು ಪತ್ರ ಬರೆಯಲಾಗಿದೆ; ನಿಯಮಗಳಲ್ಲಿ ಇದಕ್ಕೆ ಅವಕಾಶವಿದಯೇ: | ರಸ್ತೆ ಅಂಚಿನಲ್ಲಿ ಕಟ್ಟಡ ಕಟ್ಟುವವರಿಗೆ ನಿರಾಕ್ಷೇಪಣಾ ಪತ್ರ ನೀಡುವಾಗ ಲೋಕೋಪಯೋಗಿ ಇಲಾಖೆ ಗ್ರಾಮ ಪಂಚಾಯಿತಿಗಳಿಗೆ ಅಭಿಪ್ರಾಯ ಕೋರಿ ಪತ್ರ ಬರೆದಿರುವ ಪ್ರಕರಣಗಳು ಇರುವುದಿಲ್ಲ. ಬದಲಾಗಿ ಕಟ್ಟಡ ನಿರ್ಮಾಣಕ್ಕೆ ಲೈಸನ್ಸ್ ನೀಡುವ ಮುನ್ನ ಗ್ರಾಮ ಪಂಚಾಯಿತಿಯಿಂದ ನಿರಾಕ್ಷೇಪಣಾ ಪತ್ರ ನೀಡುವಂತೆ ಲೋಕೋಪಯೋಗಿ ಇಲಾಖೆಯನ್ನು ಕೋರಿದಾಗ ನಿಯಮಾನುಸಾರ ನೀಡಲಾಗುತ್ತದೆ. |
| ಉ) | ಯಾವುದೇ ರಸ್ತೆಗಳನ್ನು ರಾಜ್ಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿಯನ್ನು ಘೋಷಿಸಿದಾಗ ಮತ್ತು ಮಾರ್ಗ ಪಲ್ಲಟ (ಬೈಪಾಸ್) ಮಾಡಿದಾಗ ಹಿಂದಿನ ಹಳೆಯ ರಸ್ತೆಗಳ ನಿರ್ವಹಣೆ ಯಾರ ಜವಾಬ್ದಾರಿ; ಉಭಯ ಜಿಲ್ಲೆಗಳಲ್ಲಿ ಇಂತಹ ಎಷ್ಟು ರಸ್ತೆಗಳು ನಿರ್ವಹಣೆಗೆ ಬಾಕಿಯಿದೆ; ಈ ಕುರಿತು ಇಲಾಖೆಯ ಕ್ರಮಗಳೇನು? | ಜಿಲ್ಲಾ ಮುಖ್ಯ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೆರಿಸಿದಾಗ ಸದರಿ ರಸ್ತೆಯ ನಿರ್ವಹಣೆಯು ಲೋಕೋಪಯೋಗಿ ಇಲಾಖೆಯ ವಿಭಾಗದ ಜವಾಬ್ದಾರಿಯಾಗಿರುತ್ತದೆ,<br><br>ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೆರಿಸಿದಾಗ ಸದರಿ ರಸ್ತೆಯ ನಿರ್ವಹಣೆಯು ರಾಷ್ಟ್ರೀಯ ಹೆದ್ದಾರಿ ವಲಯದ ಜವಾಬ್ದಾರಿಯಾಗಿರುತ್ತದೆ.<br><br>ಮಾರ್ಗಪಲ್ಲಟ (ಬೈಪಾಸ್) ಮಾಡಿದಾಗ ಲೋಕೋಪಯೋಗಿ ಇಲಾಖೆಯ ರಸ್ತೆಯಾಗಿದ್ದಲ್ಲಿ ಸದರಿ ರಸ್ತೆಯ ನಿರ್ವಹಣೆಯು ಲೋಕೋಪಯೋಗಿ ಇಲಾಖೆಯ ವಿಭಾಗಗಳ ಜವಾಬ್ದಾರಿ ಯಾಗಿರುತ್ತದೆ.<br><br>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇಂತಹ ಯಾವುದೇ ರಸ್ತೆಗಳ ನಿರ್ವಹಣೆ ಬಾಕಿ ಇರುವುದಿಲ್ಲ. |

ಸಂ:ಲೋಇ/438/ಐಎಫ್ಎ/2025 (ಇ-ಕಛೇರಿ)

**ಸತೀಶ ಜಾರಕಿಹೊಳಿ**
(ಲೋಕೋಪಯೋಗಿ ಇಲಾಖೆ ಸಚಿವರು)